



ಅರುಣ ಪಿ. ಭಟ್ಟ

## ವಾರಭವಿಷ್ಯ: 30.01.2025ರಿಂದ 05.02.2025ರವರೆಗೆ




ಕೆಲವರ ಮಾತನ್ನು ನಂಬಿ ನಷ್ಟದ ವ್ಯವಹಾರದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ. ಸಹೋದರರ ವಿಶ್ವಾಸಗಳನ್ನು ಪಡೆಯಲು ಪ್ರಯತ್ನಿಸುವುದು ಸೂಕ್ತ. ನಿಮ್ಮ ಬಹುಕಾಲದ ವ್ಯಾಜ್ಯಗಳಿಗೆ ಸೂಕ್ತ ಪರಿಹಾರ ದೊರಕಲಿದೆ. ಆದಾಯ ಹೆಚ್ಚುವ ಅವಕಾಶ ವಿಪುಲವಾಗಿದೆ. ರಕ್ಷಣೆ, ಕಾನೂನು ಈ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಪ್ರಗತಿಗೆ ಅತ್ಯುತ್ತಮ ಅವಕಾಶಗಳಿವೆ. ಶುಭದಿನ: 04. ವಿಷ್ಣು ಸಹಸ್ರನಾಮ ಪಠಿಸಿರಿ.




ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶಗಳು ಕಂಡುಬರಲಿವೆ. ಕಷ್ಟದ ಕಾರ್ಯಗಳನ್ನು ಸಹ ಅನಾಯಾಸವಾಗಿ ಮಾಡಿ ಮುಗಿಸಲಿದ್ದೀರಿ. ಅವಿವಾಹಿತರಿಗೆ ವಿವಾಹದ ಯೋಗ ಸಾಧ್ಯತೆ ಕಾಣಬಹುದಾಗಿದೆ. ಪ್ರೀತಿಪಾತ್ರರಿಗೆ ಉಡುಗೊರೆಗಳನ್ನು ನೀಡುವ ಸಾಧ್ಯತೆ ಇದೆ. ವೈಯಕ್ತಿಕ ಜೀವನದಲ್ಲಿ ಸಣ್ಣ ಪುಟ್ಟ ವಿಷಯಗಳಿಗೂ ಭಿನ್ನಾಭಿಪ್ರಾಯ ತಲೆದೋರಲಿದೆ. ಶುಭದಿನ: 31. ಹನುಮಾನ್ ಚಾಲೀಸ್ ಪಠಿಸಿರಿ.




ಆತ್ಮೀಯರ ಜೊತೆ ವಿವಾದ ಹೆಚ್ಚಾಗಬಹುದು. ವ್ಯಾಜ್ಯಗಳಿಂದ ನಿಮ್ಮ ಮನಸ್ಥಿತಿ ಹಾಳಾಗಬಹುದು. ಅನಗತ್ಯವಾಗಿ ಏನಾದರೂ ಹೇಳಿ ಸಿಲುಕಬೇಡಿ. ಕೆಲಸದಲ್ಲಿ ಸಮಸ್ಯೆಗಳು ಉದ್ಭವವಾಗಲಿವೆ. ಆದಷ್ಟು ಸಮಸ್ಯೆಗಳನ್ನು ಆ ಕ್ಷಣದಲ್ಲೇ ಬಗೆಹರಿಸಲು ಪ್ರಯತ್ನಿಸಿ. ಒತ್ತಡದಿಂದ ಖಿನ್ನತೆ ಆವರಿಸಲಿದೆ. ಆದಷ್ಟು ದೈಹಿಕ ಮತ್ತು ಮಾನಸಿಕ ಚೈತನ್ಯ ನೋಡಿಕೊಳ್ಳಿ. ಶುಭದಿನ 02. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಯೋಜಿತ ಕಾರ್ಯಗಳಲ್ಲಿ ವ್ಯವಸ್ಥಿತವಾದ ಕಾರ್ಯಶೈಲಿ ಕಂಡುಬರುತ್ತದೆ. ಧನಾಗಮನ ವ್ಯವಸ್ಥೆ ಸರಾಗವಾಗಿ ನಡೆಯಲಿದೆ. ಲೇವಾದೇವಿ ವ್ಯವಹಾರಗಳಿಂದ ದೂರವಿರುವುದು ಲೇಸು. ಕುಟುಂಬದ ಜೊತೆಗೆ ಹೆಚ್ಚಿನ ಕಾಲ ಕಳೆಯಲಿದ್ದೀರಿ. ಆತ್ಮೀಯರೊಡನೆ ಮನಸ್ತಾಪ ಆಗದಂತೆ ನೋಡಿಕೊಳ್ಳುವುದು ಒಳ್ಳೆಯದು. ನಿಮ್ಮ ಪ್ರೀತಿಪಾತ್ರರಿಗೆ ಉಡುಗೊರೆ ನೀಡಲಿದ್ದೀರಿ. ಶುಭದಿನ: 05. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಜನಪ್ರಿಯತೆ ಹೆಚ್ಚಾದಂತೆ ವಿರೋಧಿಗಳು ಹೆಚ್ಚಾಗಲಿದ್ದಾರೆ. ನಿಮಗೆ ತೊಂದರೆ ನೀಡುವ ವ್ಯಕ್ತಿಗಳನ್ನು ದೂರವಿಡುವುದು ಒಳ್ಳೆಯದು. ವೈಯಕ್ತಿಕ ವಿಚಾರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ. ಪತ್ನಿಯ ವಿಚಾರಗಳಿಗೆ ಸಹಮತ ನೀಡಿ. ಆರ್ಥಿಕ ವಿಷಯದಲ್ಲಿ ಸಂತೃಪ್ತಿ ಮೂಡಲಿದೆ. ಬರುವ ಆದಾಯದ ಮೂಲಕವೇ ಅಗತ್ಯ ವಸ್ತು ಖರೀದಿಸುತ್ತೀರಿ. ಶುಭದಿನ: 01. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಬಹುಮುಖ್ಯ ಕೆಲಸವನ್ನು ನೀವು ಮರೆತುಬಿಡಬಹುದು. ಆರೋಗ್ಯದ ಹಿತದೃಷ್ಟಿಯನ್ನು ಮನಗಾಣಿರಿ. ನವೀನವಾಗಿ ಪ್ರಾರಂಭ ಮಾಡಿರುವ ಉದ್ಯೋಗ ಭರವಸೆಯ ಮಹಾಪೂರವನ್ನೇ ತರಲಿದೆ. ಆದಾಯ ಹೆಚ್ಚಳವಾಗಿದ್ದರೂ ಖರ್ಚು ವಿಪರೀತವಾಗಲಿದೆ. ಅನಪೇಕ್ಷಿತ ಖರ್ಚುಗಳಿಗೆ ಕಡಿವಾಣ ಹಾಕುವುದು ಒಳ್ಳೆಯದು. ಪತ್ನಿಯೊಡನೆ ಉತ್ತಮ ಬಾಂಧವ್ಯ ಇರಲಿದೆ. ಶುಭದಿನ: 03. ಆದಿತ್ಯ ಹೃದಯ ಪಠಿಸಿರಿ.




ತಿರುಗಾಟ ಹೆಚ್ಚಾಗಬಹುದು. ಸಾಲದ ಬಾಧೆ ಮತ್ತಷ್ಟು ಸಂಕಷ್ಟ ತಂದೊಡ್ಡಲಿದೆ. ಕಟ್ಟಡ ಕಾಮಗಾರಿಗಳಲ್ಲಿ ಹಣಕಾಸಿನ ಕುಂದುಕೊರತೆ ಕಾಡಲಿದೆ. ದೈವ ಸಂಕಲ್ಪದ ಮೊರೆಹೋಗುವ ಸಾಧ್ಯತೆ ಇದೆ. ಭೂ ವ್ಯಾಜ್ಯಕ್ಕೆ ಶ್ರಮ ಹಾಕಲಿದ್ದೀರಿ. ಕಾನೂನಿಗೆ ಸಂಬಂಧಿಸಿದ ವಿಚಾರಗಳಲ್ಲಿ ತೊಡಗಿಕೊಳ್ಳಲಿದ್ದೀರಿ. ಒತ್ತಡ ಹೆಚ್ಚಾಗಿ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಶುಭದಿನ: 31. ಚಂಡಿ ಪಾರಾಯಣ ಮಾಡಿರಿ.




ವಾರದ ಆರಂಭದಿಂದಲೇ ನಿಮ್ಮ ಕೆಲಸಗಳಿಗೆ ವೇಗ ನೀಡುತ್ತೀರಿ. ನಿಮ್ಮ ಕಾರ್ಯ ಯೋಜನೆಗಳನ್ನು ಅಂತಿಮಗೊಳಿಸಲು ನೆರವು ಸಿಗುತ್ತದೆ. ನಿಮ್ಮ ಕೆಲಸ ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಾಗುತ್ತದೆ. ವೈವಾಹಿಕ ಜೀವನ ಸಂತಸದಿಂದ ಇರುತ್ತದೆ. ಚರ್ಚಾಕೂಟಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ನಿಮ್ಮ ನಿರೀಕ್ಷೆಯಂತೆ ಆರ್ಥಿಕವಾಗಿ ಪ್ರಬಲರಾಗುವ ಸಾಧ್ಯತೆ ಇದೆ. ಶುಭದಿನ: 03. ಶ್ರೀಲಕ್ಷ್ಮೀನರಸಿಂಹ ಪಂಚರತ್ನ ಓದಿರಿ.




ಮಾನಸಿಕ ಕ್ಲೇಶಗಳು ನಿಮ್ಮ ಅಭಿವೃದ್ಧಿಗೆ ಮಾರಕವಾಗಬಹುದು. ಕುಟುಂಬದಲ್ಲಿ ಅಶಾಂತಿ ಗೋಚರವಾಗಲಿದೆ. ವ್ಯಾವಹಾರಿಕ ಕ್ಷೇತ್ರದಲ್ಲಿ ಹಿನ್ನಡೆ ಆಗಬಹುದಾದ ಸಾಧ್ಯತೆ ಉಂಟು. ಆರೋಗ್ಯದಲ್ಲಿ ವ್ಯತ್ಯಾಸ ಕಾಣಬಹುದು. ಕೌಟುಂಬಿಕ ಜೀವನದಲ್ಲಿ ನಿಮ್ಮ ಜವಾಬ್ದಾರಿಗಳು ಹೆಚ್ಚಾಗಲಿವೆ. ಸಂತಾನ ನಿರೀಕ್ಷೆಯಲ್ಲಿ ಇರುವ ದಂಪತಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ಶುಭದಿನ: 31. ಕಾಲಭೈರವನ ಸೇವೆ ಮಾಡಿರಿ.




ಉದ್ಯೋಗದಲ್ಲಿ ಉತ್ತಮ ಸ್ಥಾನಮಾನ ಸಿಗಲಿದೆ. ಸಹವರ್ತಿಗಳು ನಿಮ್ಮ ಯೋಜನೆಗಳಿಗೆ ಬೆಂಬಲ ನೀಡಲಿದ್ದಾರೆ. ಕೆಲವು ಅದೃಷ್ಟದ ಭಾಗ್ಯಗಳು ಒದಗಿಬರಲಿದೆ. ಕೋರ್ಟ್ ವ್ಯವಹಾರಗಳು ನಿಮ್ಮ ಪರವಾಗಿ ಆಗುವ ಸಾಧ್ಯತೆ ಇದೆ. ಉದ್ಯೋಗ ಸ್ಥಳದಲ್ಲಿ ನಿರೀಕ್ಷಿತ ಯಶಸ್ಸು ಸಾಧಿಸಲಿದ್ದೀರಿ. ಸ್ಪರ್ಧಾತ್ಮಕ ಪರೀಕ್ಷೆಗಳ ಫಲಿತಾಂಶ ನಿಮ್ಮ ಪರವಾಗಿ ಇರಲಿದೆ. ಶುಭದಿನ: 04. ಸೌಂದರ್ಯ ಲಹರಿ ಪಠಿಸಿರಿ.




ಅಪರಿಚಿತ ವ್ಯಕ್ತಿಗಳಿಂದ ನಿಮ್ಮ ಯೋಜನೆಗಳಲ್ಲಿ ನಷ್ಟವಾಗಬಹುದು. ನಂಬಿಕೆದ್ರೋಹದಂತಹ ಚಟುವಟಿಕೆಗಳು ನಡೆಯಲಿದ್ದು ಎಚ್ಚರದಿಂದಿರಿ. ವಾಹನದಲ್ಲಿ ಜಾಗೃತೆ ವಹಿಸುವುದು ಸೂಕ್ತ. ನಿಮ್ಮೆಲ್ಲಾ ಕೆಲಸಗಳಿಗೆ ತಾಳ್ಮೆ ಅತ್ಯವಶ್ಯಕವಾಗಿ ಬೇಕಾಗಿದೆ. ಹಣಕಾಸಿನ ವಿಷಯದಲ್ಲಿ ಉತ್ತಮ ರೀತಿಯ ವ್ಯವಹಾರ ಕಾಣಬಹುದು. ಆರೋಗ್ಯ ಸಾಧಾರಣವಾಗಿ ಇರುತ್ತದೆ. ಶುಭದಿನ: 02. ಕನಕಧಾರಾ ಸ್ತೋತ್ರ ಪಠಿಸಿರಿ.




ಕೆಲಸಕಾರ್ಯಗಳಲ್ಲಿ ನಿಮ್ಮ ಪಾಲ್ಗೊಳ್ಳುವಿಕೆ ಉತ್ತಮವಾಗಲಿದೆ. ಕಲಿಕೆಯ ವಿಷಯಾಸಕ್ತಿ ಉತ್ತಮ ಮಟ್ಟದಲ್ಲಿ ಇರಲಿದೆ. ಸ್ನೇಹಿತರ ಜೊತೆಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಮುಂದಾಗಿ. ಆರ್ಥಿಕ ಸ್ಥಿತಿ ಮಧ್ಯಮ ಗತಿಯಲ್ಲಿ ನಡೆಯಲಿದೆ. ಕೆಲಸಗಳಿಗಾಗಿ ಪರಸ್ಥಳ ವಾಸ ಅನುಭವಿಸಬೇಕಾದ ಸಂದರ್ಭ ಒದಗಿ ಬರಬಹುದು. ಒಳ್ಳೆಯ ಕೆಲಸಕ್ಕೆ ಮೆಚ್ಚುಗೆ ಲಭಿಸಲಿದೆ. ಶುಭದಿನ: 04. ಚಂಡಿ ಪಾರಾಯಣ ಮಾಡಿರಿ.